# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 435
ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 15-09-2021
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಶವ ಸಂಸ್ಕಾರಗಳಿಗೆ ಅಗತ್ಯ ಸ್ಮಶಾನಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಹಾಗಿದ್ದಲ್ಲಿ, ಬಹಳಷ್ಟು ಭೂಮಿ ನೀರಾವರಿಗೊಳಪಟ್ಟು ಶವ ಸಂಸ್ಕಾರಕ್ಕೆ ಸ್ಥಳ/ಸ್ಮಶಾನಗಳಿಲ್ಲದಿರುವ ಗ್ರಾಮಗಳಿಗೆ ಅಗತ್ಯ ಸ್ಮಶಾನಗಳನ್ನು ನಿರ್ಮಿಸಲು ಮತ್ತು ಸ್ಥಳಗಳನ್ನು ಗುರುತಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿಯೂ ಸಾರ್ವಜನಿಕ ಸ್ಮಶಾನ ಭೂಮಿ ಸೌಲಭ್ಯ ಕಲ್ಪಿಸಲು ಸರ್ಕಾರಿ ಜಮೀನು ಲಭ್ಯವಿದ್ದ ಕಡೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 71 ರಡಿ ಕಾಯ್ದಿರಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವಿರುತ್ತದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 149 ಎಲ್‌ಜಿಪಿ 2014; ದಿನಾಂಕ: 11.09.2014 ರ ಆದೇಶದ ಮೂಲಕ ಸರ್ಕಾರಿ ಜಮೀನು ಲಭ್ಯವಿರುವ ಕಡೆ ಸ್ಮಶಾನ ಉದ್ದೇಶಕ್ಕಾಗಿ ಗರಿಷ್ಠ 2-00 ಎಕರೆ ಭೂಮಿಯನ್ನು ಕಾಯ್ದಿರಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿದೆ.<br><br>ಸ್ಮಶಾನ ಉದ್ದೇಶಕ್ಕಾಗಿ ಸರ್ಕಾರಿ ಜಮೀನು ಲಭ್ಯವಿಲ್ಲದ ಗ್ರಾಮಗಳಲ್ಲಿ ಅಗತ್ಯವಾದ ಖಾಸಗಿ ಜಮೀನನ್ನು ಮೂರು ಪಟ್ಟು ಮಾರ್ಗಸೂಚಿ ಬೆಲೆಯನ್ನು ನಿಗದಿಪಡಿಸಿ ಭೂ ಮಾಲೀಕರಿಂದ ಶವ ಸಂಸ್ಕಾರದ ಉದ್ದೇಶಕ್ಕಾಗಿ ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 06 ಭೂಸ್ವಾವ್ಯಾ 2011; ದಿನಾಂಕ: 06.06.2012 ರ ಆದೇಶದ ಮೂಲಕ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.<br><br>ಸ್ಮಶಾನ ಭೂಮಿ ಅಗತ್ಯವಿರುವ ಗ್ರಾಮ ಮತ್ತು ನಗರಗಳಿಗೆ ಸ್ಮಶಾನ ಭೂಮಿ ಸೌಲಭ್ಯ ಒದಗಿಸುವ ಸಂಬಂಧ ಅಗತ್ಯ ಜಮೀನನ್ನು ಕಾಯ್ದಿರಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 204 ಎಲ್‌ಜಿಎಕ್ಸ್ 2018; ದಿನಾಂಕ: 25.10.2019 ರ ಆದೇಶದ ಮೂಲಕ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. |

ಸರ್ಕಾರಿ ಜಮೀನು ಲಭ್ಯವಿಲ್ಲದ ಗ್ರಾಮಗಳಿಗೆ ಅಗತ್ಯವಾದ ಭೂಮಿಯನ್ನು ಖಾಸಗಿ ಭೂ ಮಾಲೀಕರಿಂದ ನೇರವಾಗಿ ಖರೀದಿಸಲು ಈ ಕೆಳಗಿನಂತೆ ಒಟ್ಟು ರೂ.26,01,34,857/- (ಇಪ್ಪತ್ತಾರು ಕೋಟಿ ಒಂದು ಲಕ್ಷದ ಮೂವತ್ತು ನಾಲ್ಕು ಸಾವಿರದ ಎಂಟು ನೂರು ಐವತ್ತು ಏಳು ರೂಪಾಯಿಗಳು) ಗಳನ್ನು ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

| ಆರ್ಥಿಕ ವರ್ಷ | ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ: | ಬಿಡುಗಡೆಗೊಳಿಸಿದ ಅನುದಾನ |
|---|---|---|
| 2019-20 | ಆರ್‌ಡಿ 35 ಎಲ್‌ಜಿಪಿ 2018; ದಿನಾಂಕ: 30.09.2019 | 10.00 ಕೋಟಿ |
| 2020-21 | ಆರ್‌ಡಿ 138 ಎಲ್‌ಜಿಪಿ 2020 ದಿನಾಂಕ: 14.07.2020 | 5.00 ಕೋಟಿ |
| | ಆರ್‌ಡಿ 138 ಎಲ್‌ಜಿಪಿ 2020; ದಿನಾಂಕ: 02.12.2020 | 8,92,857/- |
| | ಆರ್‌ಡಿ 138 ಎಲ್‌ಜಿಪಿ 2020; ದಿನಾಂಕ: 26.02.2020 | 4,92,42,000/- |
| 2021-22 | ಆರ್‌ಡಿ 21 ಎಲ್‌ಜಿಪಿ 2021; ದಿನಾಂಕ: 26.07.2021 | 6.00 ಕೋಟಿ |
| | ಒಟ್ಟು | 26,01,34,857/- |

ಇ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಲ್ಲಿ ಶವ ಸಂಸ್ಕಾರಕ್ಕೆ ಸ್ಮಶಾನಗಳಿವೆ; (ತಾಲ್ಲೂಕುವಾರು ವಿವರ ನೀಡುವುದು)

ಬೆಳಗಾವಿ ಜಿಲ್ಲೆಯಲ್ಲಿ ಸ್ಮಶಾನ ಭೂಮಿ ಹೊಂದಿರುವ ತಾಲ್ಲೂಕುವಾರು ವಿವರ:

| **ಕ್ರ. ಸಂ** | **ತಾಲ್ಲೂಕು** | **ಒಟ್ಟು ಸ್ಮಶಾನ ಹೊಂದಿರುವ ಗ್ರಾಮಗಳ ಸಂಖ್ಯೆ** |
|---|---|---|
| 1 | ಬೆಳಗಾವಿ | 123 |
| 2 | ಖಾನಪೂರ | 115 |
| 3 | ಹುಕ್ಕೇರಿ | 63 |
| 4 | ಬೈಲಹೊಂಗಲ | 42 |
| 5 | ಕಿತ್ತೂರ | 21 |
| 6 | ರಾಮದುರ್ಗ | 74 |
| 7 | ಗೋಕಾಕ | 35 |
| 8 | ಸವದತ್ತಿ | 119 |
| 9 | ಮೂಡಲಗಿ | 28 |
| 10 | ಚಕ್ಕೋಡಿ | 44 |
| 11 | ನಿಪ್ಪಾಣಿ | 38 |
| 12 | ಅಥಣಿ | 64 |
| 13 | ಕಾಗವಾಡ | 16 |
| 14 | ರಾಯಬಾಗ | 34 |
| **ಒಟ್ಟು** | | **816** |

| | | |
|---|---|---|
| ಈ) | ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಲ್ಲಿ ಶವ ಸಂಸ್ಕಾರಕ್ಕೆ ಸ್ಮಶಾನಗಳಿಲ್ಲ; (ತಾಲ್ಲೂಕುವಾರು ವಿವರ ನೀಡುವುದು) | ಬೆಳಗಾವಿ ಜಿಲ್ಲೆಯಲ್ಲಿ ಶವಸಂಸ್ಕಾರಕ್ಕೆ ಸ್ಮಶಾನಗಳಿಲ್ಲದ ತಾಲ್ಲೂಕುವಾರು ವಿವರ: (see table below) |
| ಉ) | ಶವ ಸಂಸ್ಕಾರಕ್ಕೆ ಸ್ಮಶಾನಗಳಿಲ್ಲದಿರುವ ಗ್ರಾಮಗಳಲ್ಲಿ ಸ್ಮಶಾನ ಭೂಮಿ ನಿರ್ಮಿಸುವ ಸಲುವಾಗಿ ಸರ್ಕಾರ ನಿಗಧಿಪಡಿಸಿದ ದರದಲ್ಲಿ ಜಮೀನು ಸಿಗದಿರುವ ಕಾರಣ, ಜಮೀನಿನ ದರವನ್ನು ಪರಿಷ್ಕರಿಸುವ ಮತ್ತು ಅಗತ್ಯ ಮಾರ್ಗಸೂಚಿ ರಚಿಸುವ ವಿಚಾರ ಸರ್ಕಾರದ ಮುಂದಿದೆಯೇ; | ರಾಜ್ಯದಲ್ಲಿ ಸ್ಮಶಾನ ಸೌಲಭ್ಯ ಒದಗಿಸಲು ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದ ಪ್ರಕರಣಗಳಲ್ಲಿ ಅಗತ್ಯವಾದ ಖಾಸಗಿ ಜಮೀನನ್ನು ಭೂ ಮಾಲೀಕರಿಂದ ನೇರವಾಗಿ ಖರೀದಿಸಲು ಜಮೀನಿನ ಮಾರ್ಗಸೂಚಿ ಬೆಲೆಯ ಮೂರು ಪಟ್ಟು ಹೆಚ್ಚು ಬೆಲೆಯನ್ನು ನಿಗದಿಪಡಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿದೆ. ಮೂರು ಪಟ್ಟು ಮಾರ್ಗಸೂಚಿ ದರಗಳನ್ನು ನೀಡಿದಾಗಲೂ ಜಮೀನು ಲಭ್ಯವಿರದ ಸ್ಥಳಗಳ ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಯವರು ಕಾರಣಗಳನ್ನು ಹಾಗೂ ವಿವರಗಳೊಂದಿಗೆ ಪಾವತಿಸಬಹುದಾದ ದರದ ವಿವರಗಳು ಹಾಗೂ ಅದಕ್ಕೆ ಸಮರ್ಥನೆ ನೀಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 06 ಭೂಸ್ವಾಪ್ರಾ 2011 ದಿನಾಂಕ:06.06.2012 ರಲ್ಲಿ ನಿರ್ದೇಶನ ನೀಡಲಾಗಿದೆ. |
| ಊ) | ಜಮೀನಿಗೆ ಪರಿಷ್ಕೃತ ದರ ನಿಗದಿಪಡಿಸಿ ಜಮೀನು ಖರೀದಿಸಿ ಸ್ಮಶಾನಗಳನ್ನು ನಿರ್ಮಿಸುವ ಸಂಬಂಧ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ? (ವಿವರ ಒದಗಿಸುವುದು) | |

| ಕ್ರ. ಸಂ | ತಾಲ್ಲೂಕು | ಒಟ್ಟು ಸ್ಮಶಾನ ಗಳಿಲ್ಲದ ಗ್ರಾಮಗಳ ಸಂಖ್ಯೆ |
|---|---|---|
| 1 | ಬೆಳಗಾವಿ | 2 |
| 2 | ಖಾನಪೂರ | 106 |
| 3 | ಹುಕ್ಕೇರಿ | 53 |
| 4 | ಬೈಲಹೊಂಗಲ | 42 |
| 5 | ಕಿತ್ತೂರ | 22 |
| 6 | ರಾಮದುರ್ಗ | 29 |
| 7 | ಗೋಕಾಕ | 62 |
| 8 | ಸವದತ್ತಿ | 2 |
| 9 | ಮೂಡಲಗಿ | 16 |
| 10 | ಚಿಕ್ಕೋಡಿ | 12 |
| 11 | ನಿಪ್ಪಾಣಿ | 3 |
| 12 | ಅಥಣಿ | 5 |
| 13 | ಕಾಗವಾಡ | 0 |
| 14 | ರಾಯಬಾಗ | 18 |
| ಒಟ್ಟು | | 372 |

ಸಂಖ್ಯೆ: ಆರ್‌ಡಿ 134 ಎಲ್‌ಜಿಕ್ಯೂ 2021 (ಇ)

(ಆರ್. ಅಶೋಕ)

ಕಂದಾಯ ಸಚಿವರು.